# ಸುರತ್ಕಲ್ ಎನ್ಐಟಿಕೆ: ಆವಿಷ್ಕಾರಗಳ ಅನಾವರಣ ಕಾರ್ಯಾಗಾರ



**ಸುರತ್ಕಲ್, ಮಾ. 1:** ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್ಐಟಿಕೆ) ಯ ಇನ್ಸ್ಟಿಟ್ಯೂಶನ್ ಇನ್ನೋವೇಶನ್ ಕೌನ್ಸಿಲ್ (ಐಐಸಿ) ವತಿಯಿಂದ ಸುರತ್ಕಲ್ ಕ್ಯಾಂಪಸ್‌ನಲ್ಲಿ 'ಅನ್ಲೀಶಿಂಗ್ ಇನ್ನೋವೇಶನ್ಸ್ - ಫಾರ್ ಮತ್ತು ಗ್ರಾಸ್ ರೂಟ್' ಎಂಬ ಕಾರ್ಯಾಗಾರವನ್ನು ಆಯೋಜಿಸಿತ್ತು.

ನ್ಯಾಶನಲ್ ಇನ್ನೋವೇಶನ್ ಫೌಂಡೇಶನ್‌ನ ಮಾಜಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮತ್ತು ಹನಿ ಬೀ ನೆಟ್‌ವರ್ಕ್‌ನ ಸಂಸ್ಥಾಪಕ ಪ್ರೊ| ಅನಿಲ್ ಕುಮಾರ್ ಗುಪ್ತಾ ಅವರು ಕಾರ್ಯಾಗಾರದ ಮುಖ್ಯ ಅತಿಥಿ ಮತ್ತು ಪ್ರಮುಖ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಗ್ರಾಸ್‌ರೂಟ್ಸ್ ಇನ್ನೋವೇಶನ್ ಆಗ್ಮೆಂಟೇಶನ್ ನೆಟ್‌ವರ್ಕ್‌ನ ನಿರ್ದೇಶಕಿ ಪ್ರೊ| ಅನಾಮಿಕಾ ಡೇ ಅವರು ದಿಕ್ಸೂಚಿ ಭಾಷಣ ಮಾಡಿದರು.

ಎನ್ಐಟಿಕೆ ನಿರ್ದೇಶಕ ಪ್ರೊ| ಬಿ. ರವಿ ಅವರು ಹೊಸ ಅನ್ವೇಷಣೆಗೆ ಸಂಸ್ಥೆಗಳು ಒಕ್ಕೂಟವನ್ನು ರಚಿಸುವಂತೆ ಉತ್ತೇಜಿಸಿದರು.

ಇನ್ಸ್ಟಿಟ್ಯೂಟ್ ಇನ್ನೋವೇಶನ್ ಕೌನ್ಸಿಲ್‌ನ ಪ್ರಭಾರಿ ಪ್ರೊಫೆಸರ್ ಶ್ರೀವಲ್ಲ ಕೊಳತಯಾರ್ ಪ್ರಸ್ತಾವಿಸಿದರು. ರಾಜ್ಯ ಹಾಗೂ ದೇಶದ ವಿವಿಧೆಡೆಯ ಪ್ರತಿನಿಧಿಗಳು ಭಾಗವಹಿಸಿದ್ದರು.

Uadayavani, Date: 02/03/24, p, no - 02